**ಅ. ದಾ. ಸಂ. ಃ 147/2014**
**ಡಿ.ಡಬ್ಲ್ಯೂ ಃ 01**

**ದಿನಾಂಕ ಃ 21-02-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ- ವಾದಿಯ ಪರ ಶ್ರೀ. ಎಎಸ್ಎಸ್, ವಕೀಲರಿಂದ ಃ-**

ವಾದಿಯು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲೆಯ ಬಗ್ಗೆ ನನಗೆ ಮಾಹಿತಿ ಇದೆ. ವಾದಿಯು ನ್ಯಾಯಾಲಯಕ್ಕೆ ಕ್ರಯದ ಕರಾರು ಪತ್ರವನ್ನು ಹಾಜರು ಪಡಿಸಿದದಾರೆ. ನಿಪಿ-01 ಅನ್ನು ನನ್ನ ತಂದೆ ಮತ್ತು ತಾಯಿ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಿಪಿ-01 ನ್ನು ಯಾರು ಬರೆದುಕೊಟ್ಟಿದ್ದಾರೆ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಸಾಕ್ಷಿ ಮುಂದುವರೆದು ನಿಪಿ-01 ಅನ್ನು ವಾದಿಯವರು ಸೃಷ್ಟಿ ಮಾಡಿದ್ದಾರೆ ಎಂದು ನುಡಿದಿರುತ್ತಾರೆ. ನಿಪಿ-01 ಅನ್ನು ವಾದಿಯವರು ಸೃಷ್ಟಿ ಮಾಡಿದ್ದಾರೆ ಎಂದು ನನಗೆ ಈ ದಾವೆ ಹಾಕಿದ ಮೇಲೆ ಗೊತ್ತಾಯಿತು. ಸದರಿ ನಿಪಿ-01 ರ ವಿರುದ್ದ ನಾನು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ.

ದಾವಾಆಸ್ತಿಯನ್ನು ವಾದಿಗೆ ಬರೆದುಕೊಟ್ಟಿರುವ ಕಾರಣದಿಂದಾಗಿ ನಾನು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ-01 ರ ವಿರುದ್ದ ನನಗೆ ಕ್ರಮ ತೆಗೆದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ನಿಪಿ-01 ರಂತೆ ದಾವಾಆಸ್ತಿಯಲ್ಲಿ ವಾದಿಯು ಸ್ವಾಧೀನದಲ್ಲಿದ್ದಾರೆ, ಆದ ಕಾರಣ ನಾನು ನಿಪಿ-01 ಅನ್ನು ಸೃಷ್ಟಿಸಲಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗನನಗೆ ಒಂದು ಫೋಟೋವನ್ನು ತೋರಿಸಿದ್ದು , ಅದರಲ್ಲಿರುವ ಮನೆಯಲ್ಲಿ ವಾದಿಯು ವಾಸಿಸುತ್ತಿದ್ದಾರೆ. ಸಾಕ್ಷಿಯು ಮುಂದುವರೆದು ವಾದಿಗೆ ನಾವುಗಳು ಬಿಟ್ಟುಕೊಟ್ಟಿರುವ ಜಾಗ ಎಂದು ನುಡಿದಿರುತ್ತಾರೆ. ಸದರಿ

ಪೋಟೋದಲ್ಲಿ 2 ಮನೆಗಳು ಇದ್ದು, ಹಳದಿ ಬಣ್ಣದಲ್ಲಿರುವ ಮನೆಯಲ್ಲಿ ವಾದಿಯು ವಾಸಿಸುತ್ತಿದ್ದಾರೆ. ಸದರಿ ಪೋಟೋವನ್ನು **ನಿಪಿ-11 ಎಂದು ಗುರುತಿಸಲಾಯಿತು.** ನಿಪಿ-11 ರಲ್ಲಿ ಇರುವ ಹಸಿರು ಬಣ್ಣದ ಮನೆಯಲ್ಲಿ ನಾನು ವಾಸಮಾಡುತ್ತಿದ್ದೇನೆ.

ನಿಪಿ-11 ರಲ್ಲಿರುವ ಹಳದಿ ಬಣ್ಣದ ಮನೆಯನ್ನು ನನ್ನ ತಾಯಿಯು ಮಾನವೀಯತೆಯ ದೃಷ್ಟಿಯಲ್ಲಿ ವಾದಿಗೆ ಬಿಟ್ಟುಕೊಟ್ಟಿರುತ್ತಾರೆ ಮತ್ತು ವಾದಿಯು ನಮಗೆ ದೂರದ ಸಂಬಂಧಿಕರು. ಇದಕ್ಕೆ ಸಂಬಂಧಿಸಿದಂತೆ ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ. ವಾದಿಯು ನನ್ನ ತಾಯಿಯ ಸೋದರಅತ್ತೆಯ ಮೊಮ್ಮಗಳು. ದಾವಾಆಸ್ತಿಯನ್ನು ವಾದಿಗೆ ಯಾವ ವರ್ಷ ಬಿಟ್ಟುಕೊಟ್ಟಿದ್ದೇವೆ ಎಂದು ನನಗೆ ನೆನಪಿಲ್ಲ. ನನ್ನ ತಂದೆ ತಾಯಿ ದಾವಸ್ವತ್ತನ್ನು ವಾದಿಗೆ ಬಿಟ್ಟುಕೊಟ್ಟಿರುತ್ತಾರೆ.

ನನಗೆ ನಿಪಿ-01 ರಲ್ಲಿರುವ ವಿಷಯದ ಬಗ್ಗೆ ಮಾಹಿತಿ ಇದೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ನಿಪಿ-01 ರಲ್ಲಿ ಎಲ್ಲಿಯೂ ಸಹ ದಾವಾಆಸ್ತಿಯನ್ನು ಮಾನವೀಯತೆಯ ದೃಷ್ಟಿಯಿಂದ ವಾದಿಗೆ ಬಿಟ್ಟುಕೊಟ್ಟಿದ್ದಾರೆ ಎಂದು ಹೇಳಿಲ್ಲ ಎಂದರೆ ಸರಿ , ಸಾಕ್ಷಿ ಮುಂದುವರೆದು ಅದು ಸೃಷ್ಟಿಸಲಾಗಿರುವ ದಾಖಲೆಯಾಗಿದೆ ಎಂದು ನುಡಿಯುತ್ತಾರೆ. ನಿಪಿ-01 ರಲ್ಲಿ ಹಣವನ್ನು ನಮೂದು ಮಾಡಿರುವ ಬಗ್ಗೆ , ಸ್ವಾಧೀನವನ್ನು ಬಿಟ್ಟುಕೊಟ್ಟಿರುವ ಬಗ್ಗೆ , ದಾವಾಆಸ್ತಿಯ ಚೆಕ್ಕುಬಂಧಿಯ ಬಗ್ಗೆ ಬರೆದಿದೆ ಎಂದರೆ ಸರಿಯಲ್ಲ.

ಈ ದಾವೆಯನ್ನು ಹಾಕುವ ಮೊದಲು ನಾವು ಹಿರಿಯರನ್ನು ಕರೆಯಿಸಿ ಸ್ವಾಧೀನವನ್ನು ಬಿಟ್ಟುಕೊಡುವಂತೆ ವಾದಿಯನ್ನು ಕೇಳಿದ್ದೇವೆ. ಸದರಿ ಹಿರಿಯರು ನನ್ನ ಸಂಬಂಧಿಕರಾದ ದೊಡ್ಡಪ್ಪ ಮತ್ತು ಮಾವಂದಿರಾಗಿರುತ್ತಾರೆ. ಇದರ

ಕುರಿತಾಗಿ ನಾವು ಯಾವುದೇ ಕಾನೂನು ಕ್ರಮವನ್ನು ತೆಗೆದುಕೊಂಡಿಲ್ಲ. ನಿಪಿ-01 ರಂತೆ ವಾದಿಗೆ ಕಾನೂನುಬದ್ದವಾಗಿ ಸ್ವಾಧೀನವನ್ನು ಬಿಟ್ಟುಕೊಟ್ಟಿರುವ ಕಾರಣ , ನಾವು ಅವರನ್ನು ಮರಳಿ ಸ್ವಾಧೀನ ಕೇಳಲು ಯಾವುದೇ ಕಾನೂನು ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ.

ನಿಪಿ-01 ರಂತೆ ನನ್ನ ತಂದೆ ತಾಯಿ ಒಂದುಲಕ್ಷ ರೂ.ವನ್ನು ವಾದಿಯವರ ಕಡೆಯಿಂದ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ಉಳಿದ 60 ಸಾವಿರ ರೂ.ಗಳನ್ನು ಪಡೆದ ನಂತರ ನಿಪಿ-01 ಅನ್ನು ನೋಂದಣಿ ಮಾಡುತ್ತೇವೆಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-01 ನ್ನು ನೋಂದಣಿ ಮಾಡುವಷ್ಟರಲ್ಲಿ ನನ್ನ ತಂದೆ ಮೃತಪಟ್ಟಿರುತ್ತಾರೆ ಮತ್ತು ಅದಕ್ಕೆ ಸಂಬಂಧಿಸಿದಂತೆ ವಾದಿಯು ನನಗೆ ಮತ್ತು ಇತರ ಪ್ರತಿವಾದಿಗಳಿಗೆ ನೋಟೀಸನ್ನು ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನೋಟೀಸಿಗೆ ನಾವುಗಳು ಉತ್ತರವನ್ನು ನೀಡಿದ್ದೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ನೋಟೀಸು ನನ್ನ ತಾಯಿಯ ಹೆಸರಿಗೆ ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ನೋಟೀಸಿಗೆ ಪ್ರತ್ಯುತ್ತರ ಕೊಡಲು ನಾವು ಕುಣಿಗಲ್‌ನಲ್ಲಿರುವ ವಕೀಲರಾದ ಬಿ.ಆರ್.ರಂಗಸ್ವಾಮಿಯವರನ್ನು ನೇಮಿಸಿಕೊಂಡಿರುತ್ತೇವೆ. ಸದರಿ ಪ್ರತ್ಯುತ್ತರವನ್ನು ನಾನು ಮತ್ತು ಇತರ ಪ್ರತಿವಾದಿಗಳು ನೀಡಿದ ಮಾಹಿತಿ ಮೇರೆಗೆ ಕಳುಹಿಸಿರುತ್ತೇವೆ. ಸದರಿ ಪ್ರತ್ಯುತ್ತರದಲ್ಲಿ Goodwill ಆಧಾರದ ಮೇಲೆ ದಾವಾಆಸ್ತಿಯನ್ನು ನೀಡಿದ್ದೇವೆ ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಮಾನವೀಯತೆಯ ದೃಷ್ಟಿಯಿಂದ ದಾವಾಆಸ್ತಿಯನ್ನು ನೀಡಿರುತ್ತೇವೆ ಎಂದು ನುಡಿದಿರುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ, ಮಾಗಡಿ.**